# ಪೃಥ್ವಿಯೊಳಗಿನ ಸಿನಿಮಾ ಲೋಕ

**ಸಿನಿಮಾವೊಂದರ ಉದ್ದೇಶ ಜನರಿಗೆ ಒಳ್ಳೆಯ ಕಥೆ ನೀಡುವುದಷ್ಟೇ ಆಗಿರಬೇಕು ಎನ್ನುವುದು ನಿರ್ದೇಶಕ ಪೃಥ್ವಿ ಕೊಣನೂರು ನಿಲುವು. ವಾಸ್ತವಿಕ ನೆಲೆಗಟ್ಟಿನಲ್ಲಿ ಸಿನಿಮಾ ಹೆಣೆಯುವ ಅವರ ನಿರ್ದೇಶನದ 'ಪಿಂಕಿ ಎಲ್ಲಿ?' ಚಿತ್ರ ಈಚೆಗೆ ಬಿಡುಗಡೆಯಾಗಿದೆ. ಮತ್ತೊಂದು ಚಿತ್ರ 'ಹದಿನೇಳೆಂಟು' ಕೂಡ ತೆರೆಕಾಣುತ್ತಿದೆ. ಈ ಸಂದರ್ಭ, ತಮ್ಮ ಸಿನಿಮಾಗಳ ಒಳನೋಟವನ್ನು ಪೃಥ್ವಿ ಇಲ್ಲಿ ತೆರೆದಿಟ್ಟಿದ್ದಾರೆ.**

■ ಸುಮಲತಾ ಎನ್‌.



ನಮ್ಮ ಸುತ್ತ ನಡೆಯುತ್ತಿರುವ ಸಂಗತಿಗಳನ್ನು ಅವುಗಳ ವಾಸ್ತವಿಕ ನೆಲೆಗಟ್ಟಿನಲ್ಲೇ 'ಸಿನಿಮಾ' ಆಗಿ ಕಟ್ಟಿಕೊಡಬಲ್ಲ ಛಾತಿ ನಿರ್ದೇಶಕ ಪೃಥ್ವಿ ಕೊಣನೂರು ಅವರದ್ದು. ರೈಲ್ವೆ ಚಿಲ್ಡ್ರನ್, ಪಿಂಕಿ ಎಲ್ಲಿ?, ಹದಿನೇಳೆಂಟು... ಅವರ ಛಾತಿಗೆ ಕನ್ನಡಿ ಹಿಡಿದಂತಿರುವ ಈ ಸಿನಿಮಾಗಳು ತಮ್ಮ ವಸ್ತುವಿಷಯದ ಸತ್ವದಿಂದಲೇ ಗಮನ ಸೆಳೆದಂಥವು.

ಕನ್ನಡ ಚಿತ್ರರಂಗದಲ್ಲಿ ಭರವಸೆಯ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಪೃಥ್ವಿ ಕೊಣನೂರು, 'ಹೊಸತನ'ದ ಸೂತ್ರದಲ್ಲಿ ಸಿನಿಮಾಗಳನ್ನು ಗಟ್ಟಿಯಾಗಿ ಹೆಣೆಯುತ್ತಿರುವವರು. ಬೆರಳೆಣಿಕೆಯ ಸಿನಿಮಾಗಳಲ್ಲಿಯೇ ತಮ್ಮ ನಿರ್ದೇಶನದ ಸಾಮರ್ಥ್ಯವನ್ನೂ ಸಾಬೀತುಪಡಿಸಿಕೊಂಡವರು.

ಅವರ ನಿರ್ದೇಶನದ 'ಪಿಂಕಿ ಎಲ್ಲಿ?' ಸಿನಿಮಾ ಈಚೆಗೆ ಬಿಡುಗಡೆಗೊಂಡಿದ್ದು, ಇದೇ ಜೂನ್ 23ರಂದು ಮತ್ತೊಂದು ಸಿನಿಮಾ 'ಹದಿನೇಳೆಂಟು' ತೆರೆಕಾಣುತ್ತಿದೆ. ಈ ಸಂದರ್ಭದಲ್ಲಿ ತಮ್ಮ ಸಿನಿಮಾಗಳ ಕುರಿತು, ತಾವು ಸಿನಿಮಾ ಕಟ್ಟುವ ಪ್ರಕ್ರಿಯೆಯ ಕುರಿತು ಮಾತನಾಡಿದ್ದಾರೆ ಪೃಥ್ವಿ.

'ದಿನನಿತ್ಯ ಏನೇನೋ ಘಟನೆಗಳನ್ನು ನೋಡುತ್ತಿರುತ್ತೇವೆ. ಯಾವುದಾದರೂ ಒಂದು ವಿಷಯ ಮನಸ್ಸಿನಲ್ಲಿ ಹಾಗೇ ಕುಳಿತುಬಿಟ್ಟಿರುತ್ತದೆ. ಅದು ಸಿನಿಮಾಗೆ ಗಟ್ಟಿ ವಸ್ತುವಾಗಬಲ್ಲದು ಎನಿಸಿದರೆ, ಅದನ್ನು ಎಕ್ಸ್‌ಪ್ಲೋರ್ ಮಾಡುತ್ತಾ ಹೋಗುತ್ತೇನೆ. ಆದಷ್ಟು ಜಾಗರೂಕವಾಗಿ ವಿಷಯ ಆರಿಸಿಕೊಳ್ಳುತ್ತೇನೆ' ಎಂದು, ಘಟನೆಯೊಂದು ಸಿನಿಮಾ ಆಗಿ ರೂಪುಗೊಳ್ಳುವ ಹಂತವನ್ನು ವಿವರಿಸುತ್ತಾರೆ.

ಅವರ ಈ ವಿವರಣೆಗೆ 'ಪಿಂಕಿ ಎಲ್ಲಿ?' ಸಿನಿಮಾ ಉತ್ತಮ ಉದಾಹರಣೆಯಂತಿದೆ. ಈಚೆಗೆ ತೆರೆಕಂಡಿರುವ ಈ ಸಿನಿಮಾ, ಮಗುವೊಂದು ಕಳುವಾಗುವ ವಿಷಯದ ಸುತ್ತ ಹೆಣೆದಿರುವ ಕಥೆ. ಮಗುವನ್ನು ಭಿಕ್ಷಾಟನೆಗೆ ಬಳಸಿಕೊಳ್ಳುವ ಜಾಲದ ಕಥೆಯಿರುವ ಈ ಸಿನಿಮಾ, ಹಲವು ಚಿತ್ರೋತ್ಸವಗಳಲ್ಲಿ ಪ್ರಶಸ್ತಿಯನ್ನೂ ಪಡೆದುಕೊಂಡಿದೆ. ಎರಡು ವರ್ಷಗಳ ನಂತರ ಇದೀಗ ಬಿಡುಗಡೆಗೊಂಡಿದೆ.

ಈಗಾಗಲೇ ಸಿನಿಮಾಗಳಲ್ಲಿ ಅಥವಾ ಬೇರೆ ಮಾಧ್ಯಮಗಳಲ್ಲಿ ಜನಪ್ರಿಯಗೊಂಡ ವಿಷಯ, ಕಥೆಗಳಿಂದ ದೂರವುಳಿಯುವ ಪೃಥ್ವಿ, ಸಮಾಜದಲ್ಲಿ ಯಾವ ವಿಷಯ ಮುನ್ನೆಲೆಗೆ ಬಂದಿಲ್ಲವೋ ಅದಕ್ಕೆ ಲಕ್ಷ್ಯ ನೀಡುವುದಾಗಿ ಹೇಳುತ್ತಾರೆ.

ಸಿನಿಮಾ ಕಟ್ಟುವುದು ನಿರ್ದೇಶಕರಿಗೆ ಎಂದಿಗೂ ಸೃಜನಶೀಲ ಸವಾಲು. ಈ ಸವಾಲನ್ನು ಮಣಿಸುವಲ್ಲಿನ ಪೃಥ್ವಿ ಅವರ ಪರಿಶ್ರಮ ಸಿನಿಮಾದಲ್ಲಿ ಎದ್ದುಕಾಣುತ್ತದೆ. ವಿಷಯದ ಕುರಿತ ಅವರ ಆಳ ಆಲೋಚನೆ ಸಿನಿಮಾದ ಪ್ರತಿ ಚೌಕಟ್ಟಿನಲ್ಲೂ ಪ್ರತಿಫಲಿಸುತ್ತದೆ. ಇದಕ್ಕೆ ಅವರ ಸಂಶೋಧನಾ ಮನೋಭಾವವೂ ಸಹಾಯಕ್ಕೆ ನಿಂತಿದೆ.

ರಿಯಲಿಸ್ಟಿಕ್ ಮಾರ್ಗದಲ್ಲಿಯೇ ಸಿನಿಮಾ ಕೊಂಡೊಯ್ಯುವುದು ಪೃಥ್ವಿ ಅವರ ಆದ್ಯತೆಯಾದ್ದರಿಂದ, ವಿಷಯಕ್ಕೆ ಸಂಬಂಧಿಸಿದಂತೆ ಆಯಾ ಸ್ಥಳಗಳಿಗೆ ಹೋಗಿ ಅಲ್ಲಿನ ಪ್ರತಿ ಸಂಗತಿಯನ್ನೂ ಒಳಗಣ್ಣಿಗೆ ತುಂಬಿಕೊಳ್ಳುತ್ತಾರೆ. ಆ ಜಗತ್ತಿನಲ್ಲಿ ತಮ್ಮನ್ನೂ ಒಳಗೊಳ್ಳುತ್ತಾರೆ. ಬೆಂಗಳೂರಿನ ಬೇರೊಂದು ಮಗ್ಗುಲನ್ನು ತೆರೆದಿಟ್ಟ 'ರೈಲ್ವೆ ಚಿಲ್ಡ್ರನ್' ಸಿನಿಮಾ ಇದಕ್ಕೆ ಮತ್ತೊಂದು ನಿದರ್ಶನ. ಮನೆಯಿಂದ ಓಡಿಬಂದು ಸಿಟಿ ಸೇರಿ ರೈಲ್ವೆ ಪ್ಲಾಟ್‌ಫಾರ್ಮ್‌ಗಳಲ್ಲಿ ಜೀವನ ಕಂಡುಕೊಳ್ಳುವ ಮಕ್ಕಳು ಅಪರಾಧ ಜಗತ್ತಿಗೆ ತೆರೆದುಕೊಳ್ಳುವ ಚಿತ್ರಣ ತೆರೆದಿಟ್ಟ ಈ ಸಿನಿಮಾ ಉತ್ತಮ ಪ್ರತಿಕ್ರಿಯೆ ಕೂಡ ಪಡೆದುಕೊಂಡಿತ್ತು.